

ಆದರೆ ನೀನು ಕಾಲುಗಳನ್ನು ಕೇಳಿಕೊಳ್ಳುತ್ತಿದ್ದೀಯೆ. ನಿನಗೆ ಕಾಲುಗಳನ್ನು ಕೊಡಬಲ್ಲೆ. ಆದರೆ ನಿನಗೆ ಎರಡೇ ಎರಡು ಕಾಲುಗಳು ಸಾಕಾಗುವುದಿಲ್ಲ. ಸುಮಾರು ನೂರು ಜತೆ ಕಾಲುಗಳು ಬೇಕಾಗುತ್ತವೆ. ಒಂದು ಕಾಲಿಗೆ ಶೂ ಹಾಕಿ, ಇನ್ನೊಂದನ್ನು ಖಾಲಿ ಬಿಡಬಾರದು. ಎಲ್ಲ ಕಾಲುಗಳಿಗೂ ಶೂ ಕೊಳ್ಳಲು ನಿನ್ನ ಬಳಿ ಹಣ ಇದೆಯೇ? ಮತ್ತೊಮ್ಮೆ ಯೋಚಿಸು' ಎಂದು ವೃಕ್ಷದೇವತೆ ಹೇಳಿತು.

'ಆಯಿತು, ಮೊದಲು ಸಂಪಾದನೆ ಮಾಡಿ ನಂತರ ಶೂ ಕೊಂಡು, ಆಮೇಲೆ ಕಾಲುಗಳಿಗಾಗಿ ವಾಪಸು ಬರುತ್ತೇನೆ' ಎಂದು ಹಾವು ಅಲ್ಲಿಂದ ಹೊರಟಿತು.

ಈಗ ಹಾವು ಎಲ್ಲಾ ಕಡೆಯೂ ಕೆಲಸಕ್ಕೆ ಅರ್ಜಿ ರೆಡಿ ಮಾಡಿಕೊಂಡು ಕೆಲಸ ಹುಡುಕಲು ಶುರು ಮಾಡಿತು. ಆದರೆ ಎಲ್ಲರಿಗೂ ಹಾವಿಗೆ ಕೆಲಸ ಕೊಡಲು ಭಯ. ಯಾರು ನೋಡಿದರೂ ಹಾವನ್ನು ಕಂಡೊಡನೆ ಕಿಟಾರನೆ ಕಿರುಚಿಕೊಂಡು ಅಲ್ಲಿಂದ ಕಾಲುಕೀಳುವವರೇ. ಇದರಿಂದ ಬೇಸತ್ತು ಹಾವು ಕಾಡು ತೊರೆದು ನಾಡಿಗೆ ಬಂತು. ಮನುಷ್ಯರಾದ್ರು ಕೆಲಸ ಕೊಡುತ್ತಾರೆಯೇ ಪ್ರಯತ್ನಿಸೋಣ ಎಂದು.

ಒಂದು ಹಳ್ಳಿಗೆ ನುಗ್ಗಿದ ಹಾವು ಒಬ್ಬ ಹಳ್ಳಿಯವನ ಮನೆಯೊಳಗೆ ಮೆತ್ತ ಮೆತ್ತಗೆ ಬಂದು ಬಚ್ಚಿಟ್ಟುಕೊಂಡಿತು. ಹಾವನ್ನು ಕಂಡ ಹಳ್ಳಿಯವನು ಅದನ್ನು ಸಾಯಿಸಲು ಹಾರೆಯನ್ನು ತಂದ. ಇದರಿಂದ ಬೆಚ್ಚಿದ ಹಾವು ಅವನಲ್ಲಿ ತನ್ನ ಕಥೆಯನ್ನು ಹೇಳುತ್ತಾ – 'ನೀನಾದರೂ ನನಗೆ ಕೆಲಸ ಕೊಡು, ನೀನು ಹೇಳಿದಂಗೆ ಮಾಡುತ್ತೇನೆ. ನನ್ನ ಸಂಪಾದನೆ ಮುಗಿದ ತಕ್ಷಣ ನಾನು ಕಾಡಿಗೆ ಮರಳುತ್ತೇನೆ' ಎಂದು ಬೇಡಿಕೊಂಡಿತು.

ಹಳ್ಳಿಯವನು ಕೂಡ ಬಡವ. ಒಂದು ಕ್ಷಣ ಯೋಚಿಸಿ, ಹಾವಿನ ಕೈಲಿ ಯಾವ ಕೆಲಸ ಮಾಡಿಸಬಹುದೆಂದು ಊಹಿಸುತ್ತ, ತನ್ನ ಬಳಿಯಲ್ಲಿದ್ದ ಸಣ್ಣ ಬುಟ್ಟಿಯನ್ನು ತಂದು ಅದರೊಳಗೆ ಹಾವನ್ನು ಹಾಕಿಕೊಂಡ. ಸೋರೆಕಾಯಿ ಬುರುಡೆಯಲ್ಲಿ ಪೀಪಿ ಮಾಡಿಕೊಂಡು, 'ತಾನು ಪೀಪಿ ಊದಿದಾಗ ಬುಟ್ಟಿಯಿಂದ ಹೊರಗೆ ಬಂದು ನೃತ್ಯ ಮಾಡುವಂತೆ ನಟಿಸಬೇಕು, ಎಲ್ಲರನ್ನೂ ರಂಜಿಸಿ ಸಂಪಾದನೆ ಮಾಡೋಣ' ಎಂದು ಹೇಳಿದ. ಇದಕ್ಕೆ ಒಪ್ಪಿದ ಹಾವು ಅವನು ಹೋದಕಡೆಯಲ್ಲಾ ಹೋಗುತ್ತಿದೆ. ಆದರೆ ತನ್ನ ನೂರು ಕಾಲಿಗೂ ಶೂ ಕೊಳ್ಳುವಷ್ಟು ಸಂಪಾದನೆ ಅದಕ್ಕಿನ್ನೂ ಆಗಿಲ್ಲ.





# ಚಿಂಕು–ಪಿಂಕು

ಚಿಂಕು–ಪಿಂಕು
ಮುದ್ದು ಮೊಲಗಳೆರಡು
ಹಸಿದು, ಪೊಟರೆ ಬಿಟ್ಟು
ಹೊಲದ ಬಳಿ ಬಂದವು.

ಬೆಳೆದು ನಿಂತ ಹಸಿರು
ಹುಲ್ಲು, ಕಂಡು ಅವು
ಕುಣಿ ಕುಣಿದು
ಕುಪ್ಪಳಿಸಿದವು.

ಎಲ್ಲೋ ದೂರದಿ ಬರುವ
ಡೊಳ್ಳಿನ ನಾದ ಆಲಿಸಿ
ಅವು– ಕಿವಿ ನಿಮಿರಿಸಿ
ನಿಂತವು.

ಡೊಳ್ಳಿನ ಶಬ್ದ ಜೋರಾಯಿತು
ಮೊಲಗಳ ಎದೆ ಝಲ್ಲೆಂದಿತು
ಭಯದಿ ಓಡಿ ಬಂದ ಅವು
ಬದಿಯ ಪೊದೆ ಸೇರಿದವು

ನಿಮಿಷ ಹತ್ತು ಕಳೆದವು
ಕೇಳಿ ಬಂದ ಘೋರನಾದ
ಇನ್ನಿಲ್ಲವಾಯಿತು, ಖಚಿತ
ಪಟ್ಟ, ಅವು ಮತ್ತೆ ಹೊಲಕ್ಕೆ
ಬಂದವು.

ಹೊಟ್ಟೆ ತುಂಬ ಹುಲ್ಲು
ತಿಂದು, ಹರಿವ ತೊರೆಯಲಿ
ನೀರು ಕುಡಿದು, ಹರುಷದಲಿ
ಪೊಟರೆಯತ್ತ ಓಡಿಬಿಟ್ಟವು.

■ ಅರವಿಂದ ಜಿ.ಜೋಷಿ, ಮೈಸೂರು